I/862/2021 / 16.02.2021

# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

**MANGALORE ELECTRICITY SUPPLY COMPANY LIMITED**

MESCOM

CIN:U40109KA2002SGC030425 ದೂರವಾಣಿ ಸಂಖ್ಯೆ: 0824-2885766

Mode No : ..................
e-office No : ..................
Scan : ..................
No of Pages : ..................

**ಸುತ್ತೋಲೆ**

ವಿಷಯ: ನಕಲಿ ಪ್ರಮಾಣ ಪತ್ರ ಸಲ್ಲಿಸಿ ಉದ್ಯೋಗ ಪಡೆದ ಪ್ರಕರಣಗಳಲ್ಲಿ ನೌಕರರನ್ನು ನಿಗಮ/ಸೇವೆಯಿಂದ ವಜಾಗೊಳಿಸುವ ಮುನ್ನ ಇಲಾಖಾ ವಿಚಾರಣೆಯ ಪ್ರಕ್ರಿಯೆಗಳನ್ನು ಕಡ್ಡಾಯವಾಗಿ ಪಾಲಿಸುವ ಬಗ್ಗೆ.

*********

ಮೆಸ್ಕಾಂ., ವ್ಯಾಪ್ತಿಯ ವಿವಿಧ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ /ನೌಕರರು ನೇಮಕಾತಿ ಸಂದರ್ಭದಲ್ಲಿ ಸಲ್ಲಿಸುವ ಶೈಕ್ಷಣಿಕ ವಿದ್ಯಾರ್ಹತೆಗೆ ಸಂಬಂಧಪಟ್ಟ ಅಂಕಪಟ್ಟಿ ಹಾಗೂ ಪ್ರಮಾಣ ಪತ್ರಗಳು ನಕಲಿ ಎಂದು ಸಂಬಂಧಿತ ಸಕ್ಷಮ ಪ್ರಾಧಿಕಾರಿಗಳು ನೀಡುವ ದೃಢೀಕರಣದ ಆಧಾರದ ಮೇಲೆ ಇಲಾಖಾ ವಿಚಾರಣೆ ಪ್ರಕ್ರಿಯೆ ಮತ್ತು ವಿಧಿ ವಿಧಾನಗಳನ್ನು ಅನುಸರಿಸದೆ ನೇಮಕಾತಿ ಆದೇಶದ ಷರತ್ತುಗಳನ್ವಯ ಆಪಾದಿತ ನೌಕರರನ್ನು ಯಾವುದೇ ಮುನ್ಸೂಚನೆ ನೀಡದೆ ನೇಮಕಾತಿ ಪ್ರಾಧಿಕಾರಿ/ಶಿಸ್ತು ಪ್ರಾಧಿಕಾರಿಗಳು ನೇರವಾಗಿ ಸೇವೆಯಿಂದ ವಜಾಗೊಳಿಸಿರುವುದು ಈ ಕಛೇರಿಯ ಗಮನಕ್ಕೆ ಬಂದಿರುತ್ತದೆ.

ಈ ರೀತಿಯ ಪ್ರಕರಣಗಳಲ್ಲಿ ನಿಗಮ /ಕಂಪೆನಿ ಸೇವೆಯಿಂದ ವಜಾಗೊಂಡ ನೌಕರರು ಮಾನ್ಯ ಉಚ್ಛ ನ್ಯಾಯಾಲಯಗಳಲ್ಲಿ ದಾವೆ ಹೂಡುತ್ತಿದ್ದು, ಮಾನ್ಯ ನ್ಯಾಯಾಲಯವು ಇದೇ ಮಾದರಿಯ ವಿವಿಧ ಪ್ರಕರಣಗಳಲ್ಲಿ ಆಪಾದಿತ ನೌಕರನಿಗೆ ಅವರ ಮೇಲಿನ ಆರೋಪಗಳಿಗೆ ಸಂಬಂಧಿಸಿದಂತೆ ಅಹವಾಲುಗಳನ್ನು/ದಾಖಲೆಗಳನ್ನು ಮಂಡಿಸಲು ಮುಕ್ತ ಅವಕಾಶ ನೀಡಬೇಕಾಗಿದ್ದು, ಸಾಮಾಜಿಕ ನ್ಯಾಯ ತತ್ವವನ್ನು(Principle of Social Justice) ಪಾಲಿಸಬೇಕೆಂದು ಅಭಿಪ್ರಾಯಿಸಿ ವಜಾಗೊಂಡ ನೌಕರರನ್ನು ನಿಗಮ /ಕಂಪೆನಿ ಸೇವೆಗೆ ಪುನರ್ ಸ್ಥಾಪಿಸಿ ವಜಾಗೊಂಡ ದಿನಾಂಕದಿಂದ ಅನ್ವಯವಾಗುವಂತೆ ಎಲ್ಲಾ ಸೌಲಭ್ಯಗಳನ್ನು ನೀಡಲು ಹಾಗೂ ತದನಂತರದಲ್ಲಿ ನಿಯಮಾನುಸಾರ ಇಲಾಖಾ ವಿಚಾರಣೆ ನಡೆಸಿ ಆದೇಶ ಹೊರಡಿಸಲು ಸೂಚಿಸಿರುವ ನಿದರ್ಶನಗಳು ಕಂಡುಬಂದಿರುತ್ತದೆ.

ಆದ್ದರಿಂದ, ನಕಲಿ ಅಂಕಪಟ್ಟಿ ಹಾಗೂ ಪ್ರಮಾಣ ಪ್ರಮಾಣ ಪತ್ರ ಸಲ್ಲಿಸಿ ಉದ್ಯೋಗ ಪಡೆದ ಪ್ರಕರಣಗಳಲ್ಲಿ ನೌಕರರನ್ನು ನಿಗಮ /ಸೇವೆಯಿಂದ ವಜಾಗೊಳಿಸುವ ಮುನ್ನ ಸಂಬಂಧಿತ ನೇಮಕಾತಿ/ಶಿಸ್ತು ಪ್ರಾಧಿಕಾರಿಗಳು ಕಡ್ಡಾಯವಾಗಿ ಕವಿಮಂ.,ನೌಕರರ ಸೇವಾ (ವರ್ಗೀಕರಣ, ಶಿಸ್ತು ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು-1987 ರನ್ವಯ ವಿಧಿ ವಿಧಾನಗಳನ್ನು ಪಾಲಿಸಿ ಕಡ್ಡಾಯವಾಗಿ ಇಲಾಖಾ ವಿಚಾರಣೆಯನ್ನು ನಡೆಸಿ, ಆಪಾದಿತ ನೌಕರರಿಗೆ ಅವರ ಮೇಲಿನ ಆರೋಪಗಳಿಗೆ ಸಂಬಂಧಿಸಿದಂತೆ ಅಹವಾಲುಗಳನ್ನು/ದಾಖಲೆಗಳನ್ನು ಮಂಡಿಸಲು ಸಾಮಾಜಿಕ ನ್ಯಾಯ ತತ್ವದನ್ವಯ ಮುಕ್ತ ಅವಕಾಶವನ್ನು ನೀಡಿ ಅಂತಿಮ ಆದೇಶವನ್ನು ಹೊರಡಿಸುವಂತೆ ಸೂಚಿಸಲಾಗಿದೆ.

ಆದೇಶದ ಮೇರೆಗೆ,

ಪ್ರಧಾನ ವ್ಯವಸ್ಥಾಪಕರು(ಆ & ಮಾ.ಸಂ.ಅ)(ಪ್ರ)
ಮೆಸ್ಕಾಂ.

ಪ್ರತಿಗಳು :

1. ಮುಖ್ಯ ಇಂಜಿನಿಯರ್(ವಿ).ಮೆಸ್ಕಾಂ.,ಮಂಗಳೂರು ವಲಯ/ಶಿವಮೊಗ್ಗ ವಲಯ.
2. ಅಧೀಕ್ಷಕ ಇಂಜಿನಿಯರ್(ವಿ)(ತಾಂತ್ರಿಕ)/(ಖರೀದಿ)/(ವಾಣಿಜ್ಯ)/(ಯೋಜನೆಗಳು), ಕಾರ್ಪೋರೇಟ್ ಕಛೇರಿ ಮೆಸ್ಕಾಂ.,
3. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತಗಳು.,ಮೆಸ್ಕಾಂ.,
4. ಅಧೀಕ್ಷಕ ಇಂಜಿನಿಯರ್(ವಿ), ಡಿಸಿಸಿ &ಸ್ಕಾಡಾ ಕೇಂದ್ರ/ಮಾ.ಸಂ.ಅ ಕೇಂದ್ರ/ಆರ್.ಟಿ ವೃತ್ತ.ಮೆಸ್ಕಾಂ.ಮಂಗಳೂರು.
5. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಸಿಬ್ಬಂದಿ), ಕಾರ್ಪೋರೇಟ್ ಕಛೇರಿ ಮೆಸ್ಕಾಂ., ಮಂಗಳೂರು.
6. ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಐ.ಟಿ, ಕಾರ್ಪೋರೇಟ್ ಕಛೇರಿ ಮೆಸ್ಕಾಂ., ಮಂಗಳೂರು- ಮೆಸ್ಕಾಂ.,ವೆಬ್ ಸೈಟಿನಲ್ಲಿ ಪ್ರಕಟಿಸುವುದು.
7. ಕಂಪೆನಿ ಕಾರ್ಯದರ್ಶಿ, ಕಾರ್ಪೋರೇಟ್ ಕಛೇರಿ, ಮೆಸ್ಕಾಂ., ಮಂಗಳೂರು
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗಗಳು, ಮೆಸ್ಕಾಂ.,
9. ಎಲ್ಲಾ ಲೆಕ್ಕಾಧಿಕಾರಿಗಳು(ಆಂ.ಪ), ಕಾ ಮತ್ತು ಪಾ ವಿಭಾಗಗಳು, ಮೆಸ್ಕಾಂ.,
10. ಲೆಕ್ಕಾಧಿಕಾರಿ(ಆಡಳಿತ), ಕಾರ್ಪೋರೇಟ್ ಕಛೇರಿ ಮೆಸ್ಕಾಂ., ಮಂಗಳೂರು
11. ಹಿರಿಯ ಆಪ್ತ ಕಾರ್ಯದರ್ಶಿ- ವ್ಯ.ನಿ./ನಿ(ತಾಂ), ಮೆಸ್ಕಾಂ.,
12. ಆಪ್ತ ಕಾರ್ಯದರ್ಶಿ, ಮು.ಆ.ಅ./ಆ.ಸ(ಆಂ.ಪ), ಮೆಸ್ಕಾಂ